131

# ಸಮುದಾಯ ನೀರು ಸಂಗ್ರಹಣಾ ಘಟಕದ ಮಾರ್ಗಸೂಚಿ

## I. ಕಾರ್ಯಕ್ರಮದ ಸಂಕ್ಷಿಪ್ತ ಪರಿಚಯ ಮತ್ತು ಮುಖ್ಯಾಂಶ:-

ತೋಟಗಾರಿಕೆ ಬೆಳೆಗಳಿಗೆ ನೀರಿನ ಸೌಕರ್ಯ ಕಲ್ಪಿಸುವ ಸಲುವಾಗಿ ಸಂಘ/ಸಂಸ್ಥೆ/ರೈತ ಗುಂಪುಗಳಿಗೆ ನೀರು ಸಂಗ್ರಹಣೆ ಮಾಡಲು ರಾಜ್ಯ ಕಾರ್ಯಕಾರಿಣಿ ಸಮಿತಿ ಸಭೆಯಲ್ಲಿ ತೀರ್ಮಾನಿಸಿದಂತೆ ಗರಿಷ್ಠ 6000 ಘ.ಮೀ.ಸಾಮರ್ಥ್ಯದವರೆಗಿನ ಘಟಕಗಳಿಗೆ ಪ್ರತಿ ಘ.ಮೀ.ಗೆ. ರೂ. 66.666/- ರಂತೆ ಗರಿಷ್ಠ ರೂ. 4.00 8000 ಘ.ಮೀ ಸಾಮರ್ಥ್ಯ ಘಟಕಗಳಿಗೆ ಪ್ರತಿ ಘ.ಮೀ ಗೆ ರೂ.66.666/- ರಂತೆ ಗರಿಷ್ಠ ರೂ.5.32 ಲಕ್ಷದವರೆಗೆ ಸಹಾಯಧನ ನೀಡಲು ಅವಕಾಶವಿರುತ್ತದೆ. ಇದಕ್ಕೆ ಕನಿಷ್ಠ 4.0 ಹೆ. ಪ್ರದೇಶದಲ್ಲಿ ತೋಟಗಾರಿಕೆ ಬೆಳೆಗಳನ್ನು ಬೆಳೆಯುವುದು ಕಡ್ಡಾಯವಾಗಿದೆ. For smaller size ponds cost will be on pro-rata basis depend upon the volume (minimum community tank area should be 1500 cubic m).

## II. ಕಾರ್ಯಕ್ರಮದ ಉದ್ದೇಶ:-

ಮಳೆಗಾಲದಲ್ಲಿ ಅಥವಾ ಆಯಾ ಭಾಗದಲ್ಲಿ ನೀರಿನ ಸೌಕರ್ಯಗಳು ಲಭ್ಯವಿದ್ದಲ್ಲಿ ಈ ಹೆಚ್ಚುವರಿ ನೀರನ್ನು ಶೇಖರಣೆ ಹಾಗೂ ಸಂಗ್ರಹಣೆ ಮಾಡಿ ನಂತರ ಬೇಸಿಗೆ ಕಾಲದಲ್ಲಿ ಅಥವಾ ಅಭಾವವಿರುವ ಸಂದರ್ಭದಲ್ಲಿ ತೋಟಗಾರಿಕೆ ಬೆಳೆಗಳಿಗೆ ನೀರಿನ ಸೌಕರ್ಯ ಕಲ್ಪಿಸುವುದು (Protective Irrigation under critical conditions) ಈ ಯೋಜನೆಯ ಮುಖ್ಯ ಉದ್ದೇಶವಾಗಿರುತ್ತದೆ.

## III. ತಾಂತ್ರಿಕ ವೈಶಿಷ್ಟತೆಗಳು:-

1. ನೀರು ಸಂಗ್ರಹಣೆ ಒಳ ಹರಿವಿಗಾಗಿ (Inlet) ಹಾಗೂ ಹೆಚ್ಚುವರಿ ನೀರನ್ನು ಹೊರ ಹಾಕಲು (Outlet) ಅಳತೆಯ **PVC/ ಸಿಮೆಂಟ್ ಮತ್ತು ಮಣ್ಣಿನ ಮಿಶ್ರಣದೊಂದಿಗೆ** (1:8) ಇಟ್ಟಿಗೆ ಫ್ರೇಮ್ ವರ್ಕ್ ನಿರ್ಮಾಣ ಮಾಡುವುದು (ಅವಶ್ಯವಿದಲ್ಲಿ ಮಾತ್ರ). ನೀರಿನೊಳಹರಿವು, ಹೊರಹರಿವು ಗಣನೆಗೆ ತೆಗೆದುಕೊಂಡು inlet ಮತ್ತು outlet ಗಾತ್ರವನ್ನು ನಿಗಧಿಪಡಿಸಿಕೊಳ್ಳಬೇಕು.
2. ನೀರು ಭೂಮಿಯಲ್ಲಿ ಇಂಗದಂತೆ ಸಂಗ್ರಹಣೆ ಮಾಡಲು ನೀರು ಸಂಗ್ರಹಣ ಘಟಕದ ಒಳ ಭಾಗವನ್ನು 500 Micron LDPE Film lining ಇಲಾಖೆಯಿಂದ empanel ಆಗಿರುವ ಏಜನ್ಸಿರವರಿಂದಲೇ ರೈತರು ಖರೀದಿ ಮಾಡಿ ಅಳವಡಿಸುವುದು) ಅಥವಾ Concrete lining ಅಥವಾ Stone pitching ಮಾಡುವುದು. ಇವುಗಳಲ್ಲಿ ಯಾವುದಾದರು ಒಂದನ್ನು ಬಳಸಿ ಶೇಖರಣೆ ಮತ್ತು ಸಂಗ್ರಹಿತ ನೀರು ಭೂಮಿಯಲ್ಲಿ ಇಂಗಿ ಹೋಗದಂತೆ ತಡೆಗಟ್ಟುವುದು Lining ನ ಮುಖ್ಯ ಉದ್ದೇಶವಾಗಿದೆ.

Cost for non-lined ponds / tanks (only in black cotton soils) will be 30% less. Eligible assistance will be restricted to the cost of plastic / RCC lining.

However for Non-MNREGS beneficiaries, assistance on entire cost including construction of pond / tank as well as lining can be availed under the NHM scheme.

## IV. ಫಲಾನುಭವಿಗಳ ಅರ್ಹತೆ:-

1) ಸಮುದಾಯ ನೀರು ಸಂಗ್ರಹಣಾ ಘಟಕದ ಸವಲತ್ತನ್ನು ನೊಂದಾಯಿತ /ನೊಂದಾಯಿತವಲ್ಲದ ರೈತರ ಸಂಘ/ಸಂಸ್ಥೆ/ಗುಂಪುಗಳಿಗೆ ಮಾತ್ರ ಸೀಮಿತಗೊಳಿಸಿದೆ.
2) ಸಂಘದಲ್ಲಿ ಕನಿಷ್ಠ 3 ಜನ ರೈತರು ಇರಬೇಕಾಗುತ್ತದೆ.
3) ಇದರಲ್ಲಿ ಪಾಲ್ಗೊಳ್ಳುವ ಎಲ್ಲಾ ರೈತರು ಸಂಘದ/ ಸಂಸ್ಥೆಯ ಸದಸ್ಯರು ಅಥವಾ ಪದನಾಮ ಹೊಂದಿರಬೇಕು ಮತ್ತು ಜಮೀನು ಕಡ್ಡಾಯವಾಗಿ ಪಾಲ್ಗೊಳ್ಳುವ ಸದರಿ ರೈತರ ಹೆಸರಿನಲ್ಲಿ ಪಹಣಿ ಇರಬೇಕು.
4) ಮಹಿಳೆಯ ಹೆಸರಿನಲ್ಲಿಬ್ಯಾಂಕ್ ಖಾತೆ ಹೊಂದಿದ್ದು, ಕುಟುಂಬದ ಇತರೆ ಪುರುಷ ಸದಸ್ಯರ ಹೆಸರಿನಲ್ಲಿ ಅರ್ಜಿ ಸಲ್ಲಿಸಿದ್ದಲ್ಲಿ ಯಾವುದೇ ಕಾರಣಕ್ಕೂ ಮಾನ್ಯ ಮಾಡಬಾರದು. ಮಹಿಳೆಯರ ಹೆಸರಿನಲ್ಲಿಯೇ ಅರ್ಜಿ ಸಲ್ಲಿಸುವುದನ್ನು ಉತ್ತೇಜಿಸಬೇಕು.

## V. ಅರ್ಜಿ ಸಲ್ಲಿಸುವ ವಿಧಾನ, ಅರ್ಜಿ ಪರಿಶೀಲನೆ ಮತ್ತು ಫಲಾನುಭವಿಗಳ ಆಯ್ಕೆ:

1) ಜಿಲ್ಲೆಯ ತೋಟಗಾರಿಕೆ ಉಪ ನಿರ್ದೇಶಕರು (ಜಿಪಂ) ರವರು ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯ ಮಾರ್ಗಸೂಚಿ ಪ್ರಕಾರ ಅರ್ಹ ಸಂಘ/ಸಂಸ್ಥೆ ಅರ್ಜಿಗಳನ್ನು ಆಹ್ವಾನಿಸಲು ಜಿಲ್ಲೆಗೆ ನಿಗದಿಪಡಿಸಿರುವ ಗುರಿಯ ಮಿತಿಯಲ್ಲಿ ಪ್ರಕಟಣೆಯನ್ನು ಸ್ಥಳೀಯ ಪತ್ರಿಕೆಗಳ ಮುಖಾಂತರವಾಗಿ ಹಾಗೂ ಜಿಲ್ಲೆಯ ಎಲ್ಲಾ ಕಛೇರಿ ಸೂಚನಾ ಫಲಕದಲ್ಲಿ ಪ್ರದರ್ಶಿಸುವ ಮೂಲಕ ಹೆಚ್ಚಿನ ಪ್ರಚಾರ ನೀಡಿ ಅರ್ಹ ಫಲಾನುಭವಿಗಳಿಂದ ಅರ್ಜಿಗಳನ್ನು ಆಹ್ವಾನಿಸುವುದು..
2) ಪ್ರಕಟಣೆ ಕಡ್ಡಾಯವಾಗಿ ಸಂಘಗಳ ಅರ್ಹತೆ, ಆಯ್ಕೆಯ ಮಾನದಂಡಗಳು, ಸಲ್ಲಿಸಬೇಕಾದ ದಾಖಲಾತಿಗಳು, ಅರ್ಜಿಯನ್ನು ಸಲ್ಲಿಸಲು ಕೊನೆಯ ದಿನಾಂಕ, ಜಿಲ್ಲೆಗೆ ನಿಗಧಿಪಡಿಸಿದ ಗುರಿ ಮತ್ತು ನಿಗಧಿಪಡಿಸಿದ ಗುರಿಗಿಂತ ಹೆಚ್ಚಿನ ಅರ್ಜಿಗಳನ್ನುಸ್ವೀಕರಿಸಿದ್ದಲ್ಲಿ ಅನುಸರಿಸುವ ವಿಧಾನದ ಬಗ್ಗೆ ಸ್ಪಷ್ಟವಾದ ಮಾಹಿತಿ ಇರತಕ್ಕದ್ದು.
3) **ರೈತರು ಸಲ್ಲಿಸಿರುವ ಅರ್ಜಿಗಳನ್ನು ಪರಿಶೀಲಿಸಿ ಅರ್ಹ ಅರ್ಜಿಗಳ ಅಂತಿಮ ಪಟ್ಟಿ ಮಾಡಿ ಮೊದಲು ಅರ್ಜಿ ಸಲ್ಲಿಸಿದವರಿಗೆ ಆದ್ಯತೆ ನೀಡುವುದು.**
4) ಆಸಕ್ತಿಯುಳ್ಳ ಸಂಘ/ಸಂಸ್ಥೆ ಅರ್ಜಿಯನ್ನು ಈ ಕೆಳಕಂಡ ದಾಖಲಾತಿಗಳೊಂದಿಗೆ ತಾಲ್ಲೂಕು ಹಿಸತೋನಿ/ಸತೋನಿ ಕಛೇರಿ ಅಥವಾ ಆನ್ ಲೈನ್ ಮೂಲಕ FRUITS ತಂತ್ರಾಂಶದಲ್ಲಿ ಸಲ್ಲಿಸುವುದು.

a. ಸಂಘವು ನಿಗಧಿತ ಅರ್ಜಿಯಲ್ಲಿ ಭರ್ತಿ ಮಾಡಿ ಅರ್ಜಿಯನ್ನು ಸಮೀಪದ ರೈತ ಸಂಪರ್ಕ ಕೇಂದ್ರದ ಸಹಾಯಕ ತೋಟಗಾರಿಕೆ ಅಧಿಕಾರಿಗಳಿಗೆ ನೀಡಬೇಕಾಗಿರುತ್ತದೆ. (ಸಂಘದ ಅಧ್ಯಕ್ಷರು/ಕಾರ್ಯದರ್ಶಿಗಳ passport size photo ದೊಂದಿಗೆ).

b. ಸಂಘದ ರೈತರ ಪಹಣಿ (RTC) ಜನವರಿ 2022 ರ ಮಾಹೆಯ ನಂತರದ್ದು ಆಗಿರಬೇಕು.

c. ಸಮುದಾಯ ನೀರು ಸಂಗ್ರಹಣ ಘಟಕಕ್ಕೆ ಸಂಘ/ಸಂಸ್ಥೆಯ ರಚಿಸಿರುವ/ನೊಂದಣಿಯಾಗಿರುವ ಅಧಿಕೃತ ದಾಖಲೆಗಳು ಅಂದರೆ ಸಭೆಯ ನಡವಳಿಗಳು ಠರಾವು ಪತ್ರ ಇತರೆ. (attested copies).

d. ಸಂಘದ ಹೆಸರಲ್ಲಿ ಇರುವ ಬ್ಯಾಂಕ್ ಖಾತೆಯ ಪಾಸ್ ಬುಕ್‌ನ ಪ್ರತಿ (attested copies of Bank Branch Manager).

e. ಉದ್ದೇಶಿತ 4 ಹೆ. ಜಮೀನಿನಲ್ಲಿ ಕಡ್ಡಾಯವಾಗಿ ತೋಟಗಾರಿಕೆ ಬೆಳೆಗಳು ಬೆಳೆಯಬೇಕು/ಬೆಳೆದಿರಬೇಕು. ಸದಸ್ಯರ ಹೆಸರು, ಸರ್ವೇ ನಂಬರ್, ಬೆಳೆಯ ಹೆಸರು ಮತ್ತು ಬೆಳೆಗಳ ವಿಸ್ತೀರ್ಣದ ಬಗ್ಗೆ ಮಾಹಿತಿ ನೀಡುವುದು.

f. ಅರ್ಜಿಯನ್ನು ಪರಿಶೀಲಿಸಿದ ನಂತರ ತಾಲ್ಲೂಕು ಮಟ್ಟದ ಅಧಿಕಾರಿಗಳ ಶಿಫಾರಸ್ಸಿನೊಂದಿಗೆ ತೋಟಗಾರಿಕೆ ಉಪ ನಿರ್ದೇಶಕರ ಕಛೇರಿಗೆ ಸಲ್ಲಿಸಬೇಕು.

5) ತಾಲ್ಲೂಕು ಹಿಸತೋನಿ/ಸತೋನಿ ರವರು ಅರ್ಜಿ ಹಾಗೂ ದಾಖಲಾತಿಗಳನ್ನು ಪರಿಶೀಲಿಸಿ ಅರ್ಹ ಅರ್ಜಿದಾರರ ಹೆಸರುಗಳನ್ನು ಜೇಷ್ಠತಾ ವಹಿಯಲ್ಲಿ ನಮೂದಿಸಿ 5 ದಿನಗಳೊಳಗಾಗಿ ಸಹಾಯಧನ ಅರ್ಜಿಯನ್ನು ತೋಉನಿ (ಜಿಪಂ) ರವರಿಗೆ ಎಲ್ಲಾ ದಾಖಲಾತಿಗಳ ಸಹಿತ ಕಳುಹಿಸುವುದು. ತೋಟಗಾರಿಕೆ ಉಪ ನಿರ್ದೇಶಕರು (ಜಿಪಂ) ರವರು ಜಿಲ್ಲೆಯ ಎಲ್ಲಾ ಹಿಸತೋನಿ/ಸತೋನಿ ರವರಿಂದ ಬಂದ ಅರ್ಜಿಗಳನ್ನು ಪರಿಶೀಲಿಸಿ ತಾಲ್ಲೂಕುವಾರು ಜೇಷ್ಠತಾ ಪಟ್ಟಿಯನ್ನು ಸಿದ್ಧಪಡಿಸಿ ಅನುಮೋದನೆ ನೀಡುವುದು.

6) ಜಿಲ್ಲೆಗೆ ನಿಗಧಿಪಡಿಸಿರುವ ಭೌತಿಕ ಮತ್ತು ಆರ್ಥಿಕ ಗುರಿಗಳನ್ನು ಪಾಲಿಸಿಕೊಂಡು ಜಿಲ್ಲಾ ಸಮಿತಿಯ ಗಮನಕ್ಕೆ ತಂದು ಅಥವಾ ಅನುಮತಿ ಪಡೆದು ತೋಟಗಾರಿಕೆ ಉಪ ನಿರ್ದೇಶಕರು ಘಟಕ ನಿರ್ಮಿಸಲು ಲಿಖಿತವಾಗಿ (ಸಮುದಾಯ ನೀರು ಸಂಗ್ರಹಣಾ ಘಟಕ ಕಾಮಗಾರಿ ಮುಗಿಸಲು ಗರಿಷ್ಠ 30 ರಿಂದ 45 ದಿನಗಳಲ್ಲಿ ನಿರ್ಮಿಸಿದ್ದಲ್ಲಿ ಲಿಖಿತ ಅನುಮತಿ ತನ್ನಿಂದ ತಾನೆ ರದ್ದಾಗುತ್ತದೆ) ಅನುಮತಿ /ಕಾರ್ಯಾದೇಶವನ್ನು ನೀಡುವುದು.

7) ಜಿಲ್ಲೆಯ ತೋಉನಿ (ಜಿಪಂ) ರವರು ಅರ್ಜಿಯನ್ನು ಹಾಗೂ ದಾಖಲಾತಿಗಳನ್ನು ಪರಿಶೀಲಿಸಿದ ನಂತರ ಅನುಮೋದಿತ ಕ್ರಿಯಾ ಯೋಜನೆ ಮಿತಿಯಲ್ಲಿ ಫಲಾನುಭವಿಗೆ work Order/letter of intent ನ್ನು 5 ದಿನಗಳೊಳಗಾಗಿ ನೀಡುವುದು.

128

## VI. ತಾಂತ್ರಿಕ ಪರಿಶೀಲನಾ ಕ್ರಮಗಳು:-

ತಾಕು ಪರಿಶೀಲನೆ ಸಮಯದಲ್ಲಿ ಅನುಷ್ಠಾನಾಧಿಕಾರಿಗಳು ಈ ಕೆಳಕಂಡ ಅಂಶಗಳನ್ನು ಕಡ್ಡಾಯವಾಗಿ ಪರಿಶೀಲಿಸತಕ್ಕದ್ದು.

1. ಸಂಘ/ಸಂಸ್ಥೆಯಿಂದ ಅರ್ಜಿ ಸ್ವೀಕರಿಸಿದ ನಂತರ ಸಂಬಂಧಿಸಿದ ತಾಲ್ಲೂಕು ಅಧಿಕಾರಿ/ ಸಂಬಂಧಿಸಿದ ರೈತ ಸಂಪರ್ಕ ಅಧಿಕಾರಿಯು ಸ್ಥಳ ಪರಿಶೀಲನೆ ಮಾಡಿ ಸ್ಥಳ ಸೂಕ್ತತೆ ಬಗ್ಗೆ ತಾಂತ್ರಿಕವಾಗಿ ದೃಢೀಕರಿಸಬೇಕು ಹಾಗೂ ಸಂಘದ ಫಲಾನುಭವಿಯ ತೋಟಗಾರಿಕೆ ಬೆಳೆ ತಳಿ ಮತ್ತು ಒಟ್ಟು ವಿಸ್ತೀರ್ಣದ ವಿವರಗಳನ್ನು ದೃಢೀಕರಿಸಿ ವರದಿಯನ್ನು ನೀಡಬೇಕು.
2. ಪೂರ್ಣ ಪ್ರಮಾಣದ ಕಾಮಗಾರಿ/ Structural work ಮುಗಿದ ಕೂಡಲೇ ತಾಲ್ಲೂಕು ಅಧಿಕಾರಿ/ಸಂಬಂಧಿಸಿದ ರೈತ ಸಂಪರ್ಕ ಅಧಿಕಾರಿಯು ಖುದ್ದಾಗಿ ಸ್ಥಳಕ್ಕೆ ಭೇಟಿ ನೀಡಿ, ತಾಂತ್ರಿಕವಾಗಿ ಶಿಫಾರಸ್ಸು ಮಾಡಿರುವ ಪರಿಕರಗಳನ್ನು ಬಳಸಿ ನಿರ್ಮಿಸುತ್ತಿರುವ ಬಗ್ಗೆ ಪರಿಶೀಲಿಸಿ, ಖಾತ್ರಿಪಡಿಸಿಕೊಂಡು ಈ ಘಟಕಕ್ಕೆ ಬಳಸಿದ ವಸ್ತುಗಳ ಗುಣಮಟ್ಟದ ಬಗ್ಗೆ ದೃಢೀಕರಣ ಮಾಡುವುದು.
3. ಸದರಿ ಘಟಕಕ್ಕೆ ಕೇಂದ್ರ/ರಾಜ್ಯ ಸರ್ಕಾರದ ಇತರೆ ಯಾವುದೇ ಕಾರ್ಯಕ್ರಮದಡಿ ಅಥವಾ ಬೇರೆ ಇಲಾಖೆಯ ಯೋಜನೆಗಳಿಂದ ಸಹಾಯಧನ ಪಡೆದುಕೊಂಡಿರುವುದಿಲ್ಲ ಎಂಬುದರ ಬಗ್ಗೆ ಮತ್ತು ಕನಿಷ್ಠ 5 ವರ್ಷಗಳವರೆಗೆ ಘಟಕವನ್ನು ಸಮರ್ಪಕವಾಗಿ ಸಂಘವು ಸದುಪಯೋಗಪಡಿಸಿಕೊಳ್ಳುವ ಬಗ್ಗೆ ಲಿಖಿತವಾಗಿ ದೃಢೀಕರಿಸಿಕೊಳ್ಳುವುದು.
4. ಮಂಜೂರಾತಿ ನೀಡಿದ ಪ್ರಸ್ತಾವನೆಗಳ ಕಾಮಗಾರಿಗಳನ್ನು ಪ್ರಸಕ್ತ ಆರ್ಥಿಕ ವರ್ಷದ ಮುಕ್ತಾಯಗೊಳಿಸುವುದು. ಒಂದು ವೇಳೆ ಕಾಮಗಾರಿ ಪೂರ್ಣಗೊಳ್ಳದೇ ಇರುವ ಪ್ರಸ್ತಾವನೆಗಳನ್ನು Spill over ಕಾಮಗಾರಿ ಎಂದು ಪರಿಗಣಿಸಲಾಗುವುದಿಲ್ಲ. ಈ ಬಗ್ಗೆ ಸಂಘ/ಸಂಸ್ಥೆ ರವರಿಗೆ ಲಿಖಿತ ರೂಪದಲ್ಲಿ ನೀಡುವುದು ಕಡ್ಡಾಯವಾಗಿರುತ್ತದೆ.
5. ಉದ್ದೇಶಿತ ಸಮುದಾಯ ಕೆರೆಯ ಕಾಮಗಾರಿಯ ಪ್ರಾರಂಭದಿಂದ ಮುಕ್ತಾಯದ ಹಂತದವರೆಗೆ ಸಂಬಂಧಿಸಿದ ಮೇಲ್ವಿಚಾರಣೆ ತಾಲ್ಲೂಕು ಅಧಿಕಾರಿ ಮತ್ತು ರೈತ ಸಂಪರ್ಕ ಕೇಂದ್ರದ ಅಧಿಕಾರಿಯ ಜವಾಬ್ದಾರಿಯಾಗಿರುತ್ತದೆ.
6. ಸಂಘದ ಎಲ್ಲಾ ಸದಸ್ಯರು ಸಕ್ರಿಯವಾಗಿ ಪಾಲ್ಗೊಂಡು ನಿಗಧಿತ ಸಮಯದಲ್ಲಿ ಮಂಜೂರಾತಿ ಆದೇಶದಂತೆ ಸಮುದಾಯ ಕೆರೆಯನ್ನು ನಿರ್ಮಿಸಬೇಕು ಹಾಗೂ ಮುಂದಿನ ವರ್ಷಗಳ ನಿರ್ವಹಣೆ ನೊಂದಾಯಿತ ಸಂಘದ ಸಂಪೂರ್ಣ ಹೊಣೆಗಾರಿಕೆ ಆಗಿರುತ್ತದೆ.
7. ಸಮುದಾಯ ನೀರು ಸಂಗ್ರಹಣಾ ಘಟಕವು ಗರಿಷ್ಠ 6000 ಘ.ಮೀ ಮತ್ತು 8000 ಘ.ಮೀ ಶೇಖರಣಾ ಸಾಮರ್ಥ್ಯ ಹೊಂದಿದ್ದು, 4.0 ಹೆ. (10.00 ಎಕರೆ) ತೋಟಗಾರಿಕೆ ಬೆಳೆ ಪ್ರದೇಶಕ್ಕೆ ನೀರನ್ನು ಒದಗಿಸುವ

ಸಾಮರ್ಥ್ಯಕ್ಕೆ ವಿನ್ಯಾಸವನ್ನು ರೂಪಿಸಬೇಕು. ನೀರು ಸಂಗ್ರಹಣ ಸಾಮರ್ಥ್ಯದ ಆಧಾರದ ಮೇಲೆ ಸಹಾಯಧನ ನಿಗಧಿಗೊಳಿಸಲಾಗುವುದು. (on prorata basis)

8. ಘಟಕದ ಉದ್ದ, ಅಗಲ ಮತ್ತು ಆಳ ಆಯಾ ಜಮೀನಿನ ವಿನ್ಯಾಸಕ್ಕೆ ತಕ್ಕಂತೆ ತೆಗೆದುಕೊಳ್ಳಲು ಅವಕಾಶವಿದೆ (on prorata basis). ಸದರಿ ಘಟಕದಿಂದ ಪ್ರಾಣಿ ಅಥವಾ ಮನುಷ್ಯರಿಗೆ ಯಾವುದೇ ರೀತಿಯ ಅನಾಹುತ ಸಂಭವಿಸದಂತೆ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳುವುದು (Fencing).

9. **ಸಮುದಾಯ ನೀರು ಸಂಗ್ರಹಣಾ ಘಟಕದ ಆಳವನ್ನು ಜಮೀನಿನ ಮೇಲ್ಮೈ ಭಾಗದಿಂದ ಕೆಳಹಂತದವರೆಗೆ** (From soil surface to bottom of the structure) ಅಳತೆ ಮಾಡಬೇಕಾಗಿರುತ್ತದೆ. ಯಾವುದೇ ಕಾರಣಕ್ಕೂ ಬದುಗಳ ಎತ್ತರವನ್ನು ಪರಿಗಣಿಸುವಂತಿಲ್ಲ.

ಪ್ರತಿ ಅರ್ಜಿಯನ್ನು ಸಹಾಯಕ ತೋಟಗಾರಿಕೆ ಅಧಿಕಾರಿ (RSK) ರವರು ಕಡ್ಡಾಯವಾಗಿ (ಶೇ.100 ರಷ್ಟು) ತಾಕು ಪರಿಶೀಲನೆ ನಡೆಸಬೇಕು. ಸ.ತೋ.ಅ (RSK) ರವರು ಪರಿಶೀಲಿಸಿದ ತಾಕುಗಳ ಪೈಕಿ ಕನಿಷ್ಠ ಶೇ.50% ರಷ್ಟು ತಾಕುಗಳನ್ನು ತಾಲ್ಲೂಕು ಸತೋನಿ/ಹಿಸತೋನಿ ರವರು ಪರಿಶೀಲಿಸಬೇಕು

**ಜಿಲ್ಲೆಯ ತೋಉನಿ (ಜಿಪಂ) ರವರು ಶೇ.10 ರಷ್ಟು ತಾಕುಗಳ ಪರಿಶೀಲನೆ ಕಡ್ಡಾಯವಾಗಿ ಮಾಡುವುದು. ಆದರಲ್ಲಿ ಹಿಸತೋನಿ / ಸತೋನಿ ರವರು ಪರಿಶೀಲಿಸಿರುವ ಶೇ. 5 ರಷ್ಟು ತಾಕುಗಳನ್ನು ಹಾಗೂ ಸತೋಅ ರವರು ಪರಿಶೀಲಿಸಿರುವ ಶೇ. 5 ರಷ್ಟು ತಾಕುಗಳನ್ನು ಮರುಪರಿಶೀಲನೆ ಮಾಡುವುದು.** ಹಿಸತೋನಿ / ಸತೋನಿ ರವರು ಪರಿಶೀಲಿಸಿರುವ ಅರ್ಜಿಗಳಲ್ಲಿ ಯಾವುದಾದರು ನ್ಯೂನ್ಯತೆಗಳಿದ್ದರೆ ಹಿಸತೋನಿ / ಸತೋನಿ ರವರನ್ನು ಜವಾಬ್ದಾರರನ್ನಾಗಿ ಮಾಡಿ ನಿರ್ದೇಶನಾಲಯಕ್ಕೆ ವರದಿ ಸಲ್ಲಿಸುವುದು.

**ವಿಭಾಗೀಯ ಜಂಟಿ ನಿರ್ದೇಶಕರು ರವರು ಶೇ. 5 ರಷ್ಟು ತಾಕುಗಳ ಪರಿಶೀಲನೆ ಕಡ್ಡಾಯವಾಗಿ ಮಾಡುವುದು. ಆದರಲ್ಲಿ ತೋಉನಿ (ಜಿಪಂ) ರವರು ಪರಿಶೀಲಿಸಿರುವ ಶೇ. 2 ರಷ್ಟು ತಾಕುಗಳನ್ನು ಹಾಗೂ ಹಿಸತೋನಿ / ಸತೋನಿ ರವರು ಪರಿಶೀಲಿಸಿರುವ ಶೇ. 3 ರಷ್ಟು ತಾಕುಗಳನ್ನು ಮರುಪರಿಶೀಲನೆ ಮಾಡುವುದು.**

**ಅಪರ ನಿರ್ದೇಶಕರು/ ಜಂಟಿ ನಿರ್ದೇಶಕರು ರವರು ಶೇ.1 ರಷ್ಟು ತಾಕುಗಳ ಪರಿಶೀಲನೆ ಕಡ್ಡಾಯವಾಗಿ ಮಾಡುವುದು. ಆದರಲ್ಲಿ ವಿಭಾಗೀಯ ಜಂಟಿ ನಿರ್ದೇಶಕರು ಪರಿಶೀಲಿಸಿರುವ ಶೇ.0.5 ರಷ್ಟು ತಾಕುಗಳನ್ನು ಹಾಗೂ ತೋಉನಿ (ಜಿಪಂ) ರವರು ಪರಿಶೀಲಿಸಿರುವ ಶೇ.0.5 ರಷ್ಟು ತಾಕುಗಳನ್ನು ಮರುಪರಿಶೀಲನೆ ಮಾಡುವುದು.**

ಮೇಲಿನ ಎಲ್ಲಾ ಅಧಿಕಾರಿಗಳು ತಮ್ಮ ಸ್ಥಳ ಪರಿಶೀಲನೆ ಸಮಯದಲ್ಲಿ ಕಡ್ಡಾಯವಾಗಿ ವಿವಿಧ ಹಂತಗಳ ಛಾಯಾಚಿತ್ರಗಳನ್ನು ತೆಗೆದು ದಾಖಲು ಮಾಡುವುದು.

ಯಾವುದಾದರೂ ಜಿಲ್ಲೆಗಳಿಂದ ಅರ್ಹತೆ ಹೊಂದಿಲ್ಲದ, ನಿಗಧಿಪಡಿಸಿದ ಸಮಯದ ನಂತರ ವಿಳಂಬವಾಗಿ ಅಥವಾ ಅಪೂರ್ಣವಾದ ಪ್ರಸ್ತಾವನೆಗಳನ್ನು ಸಲ್ಲಿಸಿದಲ್ಲಿ ಸಂಬಂಧಪಟ್ಟ ತೋಟಗಾರಿಕೆ ಉಪ ನಿರ್ದೇಶಕರು ಮತ್ತು ಸಂಬಂಧಪಟ್ಟ ಸ.ತೋ.ನಿ. ರಾ.ತೋ.ಮಿ. ಕೇಂದ್ರ ಕಛೇರಿ ಸಹಾಯಕರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು.

126

VII. ಅನುಮೋದನೆ:-

ಈ ಮೇಲೆ ತಿಳಿಸಿರುವ ದಾಖಲಾತಿಗಳನ್ನು ಕಡ್ಡಾಯವಾಗಿ Check list ನಲ್ಲಿರುವಂತೆ ಪರಿಶೀಲಿಸಿ, ಅರ್ಹತೆ ಇದ್ದಲ್ಲಿ ಮಾತ್ರ ಛಾಯಚಿತ್ರಗಳೊಂದಿಗೆ ಪ್ರತಿಯೊಂದು ದಾಖಲಾತಿಗಳನ್ನು ದೃಢೀಕರಿಸಿ, ತೋಟಗಾರಿಕೆ ಉಪನಿರ್ದೇಶಕರ ಹಂತದಲ್ಲಿ ಅನುಮೋದನೆ ನೀಡುವುದು.

VIII. ಸಹಾಯಧನ ವಿತರಣೆ:

1) ಜಿಲ್ಲೆಯ ತೋಉನಿ (ಜಿಪಂ) ರವರು ಎಲ್ಲಾ ದಾಖಲೆಗಳನ್ನು ಹಾಗೂ ಹಿಸತೋನಿ ನೀಡಿರುವ ಘಟಕದ ಅನುಷ್ಠಾನದ ವರದಿಯನ್ನು ಪರಿಶೀಲಿಸಿದ ನಂತರ ಕೆಲಸವು ತೃಪ್ತಿಕರವಾಗಿದ್ದಲ್ಲಿ ಮಾತ್ರ ಸಹಾಯಧನದ ಮೊತ್ತವನ್ನು ಬಿಡುಗಡೆ ಮಾಡುವುದು.
2) ಸಮುದಾಯ ನೀರು ಸಂಗ್ರಹಣ ಘಟಕವು ಪೂರ್ಣವಾಗಿ ಮುಗಿದು, lining ಮತ್ತು ತೋಟಗಾರಿಕೆ ಬೆಳೆಗಳನ್ನು ಬೆಳೆದಿರುವ ಬಗ್ಗೆ ದೃಢೀಕರಿಸಿಕೊಂಡ ನಂತರವೇ ಸಹಾಯಧನದ ಮೊತ್ತವನ್ನು ಸಂಘ/ಸಂಸ್ಥೆಯ ಬ್ಯಾಂಕ್ ಖಾತೆಗೆ ಜಮಾ ಮಾಡುವುದು.

IX. ಆರ್ಥಿಕ ಪ್ರತ್ಯಾ ಯೋಜನೆ (Delegation of Power)

ಈ ಕಾರ್ಯಕ್ರಮದಲ್ಲಿ ಮಾರ್ಗಸೂಚಿಯಂತೆ ಸಹಾಯಧನ ಮಂಜೂರು ಮಾಡಲು ಸರ್ಕಾರದ ಆದೇಶ ಸಂಖ್ಯೆ: ಎಫ್ ಡಿ-3ಟಿಎಫ್ ಪಿ2018 ದಿನಾಂಕ:14.5.2018ರ ರನ್ವಯ ಕಾಲ ಕಾಲಕ್ಕೆ ಪರಿಷ್ಕೃತವಾಗುವ ಪ್ರದತ್ತವಾದ ಆರ್ಥಿಕ ಪ್ರತ್ಯಾಧಿಕಾರವನ್ನು ಅನುಸರಿಸುವುದು ಹಾಗೂ ಆರ್ಥಿಕ ಇಲಾಖೆಯ ಆರ್ಥಿಕ ಪ್ರತ್ಯಾಯೋಜನೆಯ ಮಾರ್ಗಸೂಚಿಯನ್ನು ಪಾಲಿಸುವುದು.

X. ವರದಿ ಮಾಡುವುದು ಮತ್ತು ದಾಖಲೆಗಳನ್ನು ನಿರ್ವಹಿಸುವುದು ( Reporting and documentation):

1. ಪ್ರತಿ ಮಾಹೆಯ ಪ್ರಗತಿ ವರದಿಯನ್ನು ಇ-ಮೇಲ್ ಮೂಲಕ ತಿಂಗಳ 2ನೇ ದಿನಾಂಕದ ಒಳಗಾಗಿ ತಪ್ಪದೇ KSHMA ಕಛೇರಿಗೆ ಸಲ್ಲಿಸುವುದು.
2. ವಾರ್ಷಿಕ ಬಿಡುಗಡೆಯಾಗಿರುವ ಅನುದಾನವನ್ನು ಸಂಪೂರ್ಣವಾಗಿ ವೆಚ್ಚ ಭರಿಸಲು ಕ್ರಮಕೈಗೊಳ್ಳುವುದು. ಅನುದಾನವನ್ನು ಸಂಪೂರ್ಣವಾಗಿ ವೆಚ್ಚ ಭರಿಸಲು ಸಾಧ್ಯವಾಗದಿದ್ದಲ್ಲಿ 3ನೇ ತ್ರೈಮಾಸಿಕದ (3rd trimester) ಒಳಗಾಗಿ ಅನುದಾನದ ಬೇಡಿಕೆಯನ್ವಯ ಅಂತರ ಘಟಕಗಳಲ್ಲಿ ಮಾರ್ಪಾಡುಗಳನ್ನು ನಿರ್ದೇಶನಾಲಯದಿಂದ ಅನುಮೋದನೆ ಪಡೆಯುವುದು. ತದನಂತರ ಯಾವುದೇ ಮಾರ್ಪಾಡುಗಳನ್ನು ಪರಿಗಣಿಸಲಾಗುವುದಿಲ್ಲ.
3. ಎಲ್ಲಾ ಫಲಾನುಭವಿಗಳನ್ನೊಳಗೊಂಡ ಜಿಪಿಎಸ್ ಫೋಟೋಗಳನ್ನು ಪ್ರತಿ ತಿಂಗಳ ಅಂತ್ಯದಲ್ಲಿ ತಪ್ಪದೇ ಇಲಾಖಾ ವೆಬ್ ಸೈಟ್ ನಲ್ಲಿ ಅಳವಡಿಸಲು ಅಗತ್ಯ ಕ್ರಮವಹಿಸುವುದು.

125

4. ಯಶೋಗಾಥೆಗಳು ಮತ್ತು ಯೋಜನೆಯ ಅನುಷ್ಠಾನದಿಂದ ಆಗುವ ಪ್ರಯೋಜನಗಳನ್ನು (ಲಿಖಿತ, ದೃಶ್ಯ ಮತ್ತು ಶ್ರವಣ) ಸಾಫ್ಟ್ ಕಾಪಿ ಮತ್ತು ಹಾರ್ಡ್ ಕಾಪಿಯೊಂದಿಗೆ ಕಾರ್ಯನಿರ್ವಾಹಕ ನಿರ್ದೇಶಕರು, KSHMA ಮತ್ತು ತೋಟಗಾರಿಕೆ ಮಾಹಿತಿ ಕೇಂದ್ರ ರವರಿಗೆ ಕಳುಹಿಸುವುದು.
5. 2022-23 ನೇ ಸಾಲಿನ ಮಾರ್ಚ್ ಮಾಹೆಯ ಅಂತ್ಯಕ್ಕೆ ಫಲಾನುಭವಿಗಳ ವಿವರವನ್ನು ಕಡ್ಡಾಯವಾಗಿ KSHMA ಕಛೇರಿಗೆ ಕಳುಹಿಸುವುದು.

ಈ ಪತ್ರಕ್ಕೆ ಲಗತ್ತಿಸಿರುವ ಚೆಕ್‌ಲಿಸ್ಟ್‌ನಲ್ಲಿ ತಿಳಿಸಿರುವ ಅಂಶಗಳಂತೆ ಪ್ರಸ್ತಾವನೆಗಳನ್ನು ಸಿದ್ಧಪಡಿಸಿ ಸಲ್ಲಿಸತಕ್ಕದ್ದು.

ಮಿಷನ್ ನಿರ್ದೇಶಕರು
ಮತ್ತು
ತೋಟಗಾರಿಕೆ ನಿರ್ದೇಶಕರು

## ಪ್ರತಿಯೊಂದು ಅರ್ಜಿಯ ಜೊತೆಯಲ್ಲಿ ನೀಡಬೇಕಾದ- Check List

### ಸಮುದಾಯ ನೀರು ಸಂಗ್ರಹಣ ಘಟಕ (ಚೆಕ್‌ಲಿಸ್ಟ್)

| ಕ್ರ.ಸಂ | ದಾಖಲಾತಿಗಳು | ಲಗತ್ತು |
|---|---|---|
| 1 | ಸಂಘದ ವತಿಯಿಂದ ನಿಗಧಿತ ನಮೂನೆಯಲ್ಲಿ ಭರ್ತಿ ಮಾಡಿದ ಅರ್ಜಿ | ಹೌದು/ಇಲ್ಲ |
| 2 | ಸಂಘದ ಸದಸ್ಯರ ಹೆಸರಿನಲ್ಲಿರುವ ಹಾಲಿ ಆರ್ಥಿಕ ವರ್ಷದ ಪಹಣಿ | ಹೌದು/ಇಲ್ಲ |
| 3 | ಸಮುದಾಯ ನೀರು ಸಂಗ್ರಹಣ ಘಟಕಕ್ಕೆ ಸಂಘ/ಸಂಸ್ಥೆ ರಚಿಸಿರುವ /ನೊಂದಣಿಯಾಗಿರುವ ಅಧಿಕೃತ ದಾಖಲೆಗಳು. | ಹೌದು/ಇಲ್ಲ |
| 4 | ಸಂಘದ ಹೆಸರಲ್ಲಿ ಇರುವ ಬ್ಯಾಂಕ್ ಪಾಸ್ ಪುಸ್ತಕದ ನಕಲು ಪ್ರತಿ | ಹೌದು/ಇಲ್ಲ |
| 5 | ಠರಾವು ಪತ್ರ-ಸದರಿ ಘಟಕವನ್ನು ಯಾರ ರೈತರ ಸರ್ವೆ ನಂಬರ್‌ನಲ್ಲಿ ನಿರ್ಮಿಸಿರುವ ಬಗ್ಗೆ ಹಾಗೂ ಇದಕ್ಕೆ ಸಂಘದ ಸದಸ್ಯರಿಂದ ನಿರಾಕ್ಷೇಪಣಾ ಪತ್ರ | ಹೌದು/ಇಲ್ಲ |
| 6 | ಸಂಘದ ಫಲಾನುಭವಿಯು ಜಂಟಿ ಖಾತೆ ಹೊಂದಿದ್ದಲ್ಲಿ ಕುಟುಂಬದವರ ಒಪ್ಪಿಗೆ ಪತ್ರ/NOC. ನೋಟರಿ | ಹೌದು/ಇಲ್ಲ |
| 7 | ಪ್ರಸ್ತಾವನೆಯ ಅಂದಾಜುಪಟ್ಟಿ (Detailed Project Estimate). | ಹೌದು/ಇಲ್ಲ |
| 8 | ಘಟಕದ ನಕ್ಷೆ / Blue Print. | ಹೌದು/ಇಲ್ಲ |
| 9 | ಸಂಗ್ರಹಿಸುವ ನೀರನ್ನು ಸಂಘದ ಸದಸ್ಯರು ಬಳಸಿಕೊಳ್ಳುವ ಬಗ್ಗೆ ಸಂಘ ತೆಗೆದುಕೊಂಡ ನಿರ್ಣಯದ ಪತ್ರ | ಹೌದು/ಇಲ್ಲ |
| 10 | ಘಟಕ ನಿರ್ಮಾಣಕ್ಕೆ ಇಲಾಖೆಯಿಂದ ನೀಡಿರುವ ಅನುಮತಿ ಪತ್ರ | ಹೌದು/ಇಲ್ಲ |
| 11 | ತೋ.ಉ.ನಿ ಹಾಗೂ ತಾಲ್ಲೂಕು ಅಧಿಕಾರಿಗಳು ಸಹಾಯಧನದ ಮೊತ್ತಕ್ಕೆ ಶಿಫಾರಸ್ಸು ಮಾಡಿರುವ ಪತ್ರ | ಹೌದು/ಇಲ್ಲ |
| 12 | ಸ್ಥಳ ಸೂಕ್ತತಾ ಮತ್ತು ಸ್ಥಳ ಪರಿಶೀಲನೆ ಪ್ರಮಾಣ ಪತ್ರ | ಹೌದು/ಇಲ್ಲ |
| 13 | ತೋಟಗಾರಿಕೆ ಬೆಳೆಗಳ ಬಗ್ಗೆ ಇಲಾಖಾ ಅಧಿಕಾರಿಗಳ ದೃಢೀಕರಣ ಪತ್ರ | ಹೌದು/ಇಲ್ಲ |
| 14 | ಸದರಿ ಘಟಕಕ್ಕೆ ಯಾವುದೇ ಇಲಾಖೆಯಿಮದ ಸಹಾಯಧನ ಪಡೆದಿರುವುದಿಲ್ಲವೆಂದು ತಾಲ್ಲೂಕು ಅಧಿಕಾರಿಗಳ ದೃಢೀಕರಣ ಪತ್ರ | ಹೌದು/ಇಲ್ಲ |
| 15 | ಅಗತ್ಯವಿರುವ ಎಲ್ಲಾ ದಾಖಲಾತಿಗಳಿಗೆ ತಾಲ್ಲೂಕು ಅಧಿಕಾರಿಗಳ ದೃಢೀಕರಣ ಪತ್ರ | ಹೌದು/ಇಲ್ಲ |

ಸಹಿ:

ದಿನಾಂಕ: ____________

ಹಿ.ಸ.ತೋ.ನಿ/ಸ.ತೋ.ನಿ:

ತಾಲ್ಲೂಕು____________